# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com

Corporate Identity Number (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:264**

**ವೇದಿಕೆಯ ಸದಸ್ಯರು:**

ಶ್ರೀಮತಿ **ಶರಣಮ್ಮ ಎಸ್ ಜಂಗಿನ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವೃತ್ತ, ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.
ಶ್ರೀ **ರೇವಣಸಿದ್ದಪ್ಪ ಗವಣ್ಣವರ,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.
ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀ ಜಗನಾಥ ವಿ ಲದ್ವಾ,
(R R No : 208119C)
C/o ಟಿ ಎಂ ಬದ್ದಿ,
ಅರಿಹಂತ ಪಾರ್ಕ,
ಕೇಶ್ವಾಪೂರ ಹುಬ್ಬಳ್ಳಿ-580023. ..............**ದೂರುದಾರರು**.

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪವಿಭಾಗ-2,
ಹೆಸ್ಕಾಂ, ಹುಬ್ಬಳ್ಳಿ. ..................**ಪ್ರತಿವಾದಿಗಳು**.

**ಪೀಠಿಕೆ:**

1. ಶ್ರೀ ಜಗನಾಥ ವಿ ಲದ್ವಾ, ಸ್ಥಾವರ ಸಂಖ್ಯೆ: 208119C ನೇದ್ದ ಸ್ಥಾವರವು 4 ಕಿ.ವ್ಯಾ. ವಿದ್ಯುತ್ ಮಂಜೂರಾತಿ ಭಾರದೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ದಿನಾಂಕ:12-07-2005 ರಂದು ಸಂಪರ್ಕಿತಗೊಂಡಿದ್ದಿರುತ್ತದೆ. ಸದರಿ ಸ್ಥಾವರಕ್ಕೆ ಮೇ-2015 ರಿಂದ ಎಪ್ರೀಲ್-2018 & 15 ದಿನಗಳಿಗೆ ಎಮ್.ಎನ್.ಆರ್ ಎಂದು ಪರಿಗಣಿಸಿ ಆಂತರಿಕ ಪರಿಶೋಧನೆಯವರು ಸದರಿ ಅವಧಿಗೆ ಬಿಲ್ ಮಾಡಿ ರೂ. 1,97,052/- ಕಂದಾಯ ಕೊರತೆ ಮೊತ್ತವನ್ನು ಪಾವತಿಸಲು ಗ್ರಾಹಕರಿಗೆ ತಿಳಿಸಿರುತ್ತಾರೆ. ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ಸದರಿ ಸ್ಥಾವರ ಮೇ-2015 ರಿಂದ ಎಪ್ರೀಲ್-2018 ರ ಅವಧಿಯಲ್ಲಿ ಸದರಿ ಸ್ಥಾವರವು Normal ಆಗಿ ಇತ್ತು ಆದರೆ ಲೈನ್ಸನ್ಸುದಾರರು ಸ್ಥಾವರದ ಮಾಪಕವು ಎಂ.ಎನ್.ಆರ್. ಎಂದು ಕಂದಾಯ ಕೊರತೆ ಮೊತ್ತ ರೂ.1,97,052/- ಗಳನ್ನು ಆಕರಣೆ ಮಾಡಿರುತ್ತಾರೆ. ಸದರಿ ಆಕರಿಸಿದ ಮೊತ್ತವು ನಿಗಮದ ಶಾಖಾಧಿಕಾರಿಗಳು ಮತ್ತು ಮೀಟರ್ ರೀಡರ್‌ಗಳ ಕರ್ತವ್ಯದಲ್ಲಿನ ಬೇಜವಾಬ್ದಾರಿತನದಿಂದ ಆದ ತಪ್ಪಿನಿಂದಾದದ್ದು, ಆದ್ದರಿಂದ ಲೈಸನ್ಸುದಾರರು ನೀಡಿರುವ ಬಿಲ್‌ನ್ನು ವಜಾಗೊಳಿಸಿ, ನ್ಯಾಯಯುತ ಆದೇಶವನ್ನು ನೀಡಬೇಕೆಂದು ಎಂದು ಗ್ರಾಹಕರು ದಿನಾಂಕ:12-09-2022 ರಂದು ವೇದಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ
2. ಶ್ರೀ ಜಗನಾಥ ವಿ ಲದ್ವಾ, ಸ್ಥಾವರ ಸಂಖ್ಯೆ: 208119C ನೇದ್ದ ಸ್ಥಾವರವು 4 ಕಿ.ವ್ಯಾ. ವಿದ್ಯುತ್ ಮಂಜೂರಾತಿ ಭಾರದೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ದಿನಾಂಕ:12-07-2005 ರಂದು ಸಂಪರ್ಕಿತಗೊಂಡಿದ್ದಿರುತ್ತದೆ. ಜೂನ್-2015 ರಿಂದ ಎಪ್ರೀಲ್-2018 ರ ಅವಧಿಯಲ್ಲಿ ಕಡಿಮೆ ಬಳಕೆ ದಾಖಲಾಗುತ್ತಾ ಬಂದು ನವೆಂಬರ್-2017 ರಂದು ಮಾಪಕವು M.N.R ಆಗಿರುತ್ತದೆ. ಸದರಿ ಅವಧಿಗೆ

ಆಂತರಿಕ ಪರಿಶೋಧನೆಯವರು ಕಂದಾಯ ಕೊರತೆ ಮೊತ್ತ ರೂ. 1,97,052/-ಗಳನ್ನು ಆಕರಿಸಿ ಕಚೇರಿಗೆ ವರದಿ ನೀಡಿದನ್ವಯ ಈ ಕಚೇರಿ ಪ್ರೋವಿಜಿನಲ್ ನೋಟೀಸ್ ಸಂಖ್ಯೆ:ಹೆಸ್ಕಾಂ/ನ.ಉ.ವಿ-2/ಸ.ಕಾ.ನಿ.ಇಂ(ವಿ)/ಸ.ಲೆ/ಹಿಸ/ಬಿ4/2020-21/15108-15160 ದಿನಾಂಕ:06-03-2021. ರಡಿಯಲ್ಲಿ ಗ್ರಾಹಕರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಸದರಿ ಕಂದಾಯ ಕೊರತೆ ಮೊತ್ತವನ್ನು ಗ್ರಾಹಕರು ಯಾವುದೇ ತಕರಾರು ಇಲ್ಲದೇ ದಿನಾಂಕ:06-07-2021 ರಶೀದಿ ಸಂಖ್ಯೆ:63584290405 ರಲ್ಲಿ ಕಂಪನಿಗೆ ಪಾವತಿಸಿರುತ್ತಾರೆ.

3. ಸದರಿ ಸ್ಥಾವರದ ಹಿಂಬಾಕಿಯೂ ಯಾವುದೇ ದಂಡದ ಮೊತ್ತವಾಗಿರದೇ ಮಾಪಕವು ದೋಷಪ್ರರಿತವಾಗಿದ್ದು, ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ, ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲು ಇರುವುದರಿಂದ ಕೆ.ಇ.ಆರ್.ಸಿ.. ನಿಯಮಾವಳಿ ಕಂಡಿಕೆ 29.03 ರಪ್ರಕಾರ ಸದರಿ ವ್ಯತ್ಯಾಸದ ಮೊತ್ತವನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಿದ್ದು, ಸದರಿ ಮೊತ್ತವನ್ನು ಗ್ರಾಹಕರು ಯಾವುದೇ ತಕರಾರಿಲ್ಲದೆ ಪಾವತಿಸಿದ್ದರಿಂದ ವಿದ್ಯುತ್ ಸ್ಥಾವರ ಸಂಖ್ಯೆ 208119C ಗೆ ಈಗಾಗಲೇ ಆಕರಿಸಲಾದ ಕಂದಾಯ ಕೊರತೆ ಮೊತ್ತ ರೂ. 1,97,052/-ಗಳು ಸರಿ ಇರುತ್ತದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

4. ಸದರ ಪ್ರಕರಣವನ್ನು ದಿನಾಂಕ:04-11-2022 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

ಗ್ರಾಹಕರ ಪ್ರತಿನಿಧಿ
ಶ್ರೀ ತುಷಾರ ಎಂ ಬದ್ದಿ

ನಿಗಮದ ಪರವಾಗಿ
ಶ್ರೀ ಡಿ ಎಫ್ ಲಂಗೋಟಿ.
ಸ.ಕಾ.ನಿ.ಇಂ(ವಿ)
ಕಾ ಮತು ಪಾ ಶಹರ ಉಪವಿಭಾಗ-2, ಹುಬ್ಬಳ್ಳಿ.

**ಗ್ರಾಹಕರ ಪರವಾಗಿ ಶ್ರೀ ತುಷಾರ ಬದ್ದಿ, ಹುಬ್ಬಳ್ಳಿ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ**

## MEMO OF COMPLAINT

By Shri J V Ladwa by his Authorised Representative Tushar M Baddi R/o Hubballi

***

**BRIEF FACTS**

It is most respectfully submitted that the installation bearing RR No 208119C standing in the name of Shri J V Ladwa, Hubballi was serviced for Commercial Installation with a sanctioned load of 4KW under LT-3 tariff, here it is important to note that the meter of the commercial premises was kept vacant/idle from the month of June 2015 to April 2018 because the two shops connected with two separate meters were made as a single unit.

1. Such being the facts of the case the Licensee has issued a demand note stating that the meter of the installation bearing RR No 208119C was found to be MNR and Rs 197052/- was demanded as alleged on 06.03.2021 as short claim from June 2015 to April 2018.
2. In the light of the above the consumer herein wishes to elaborate the case as under:
   i. It is evident to note from the customer history maintained by the licensee shows that the installation was read as NORMAL from June 2015 to October 2017.

.....3

ii. It is also important to note that even assuming but not admitting that the meter is found to be MNR in the aforesaid period then it is the obligatory duty of the licensee to furnish on record the meter testing report so as to ascertain whether the meter is actually found to be MNR or not.

iii. *Duties of the Meter Reader as specified by the licensee*:
Taking Meter Readings and billing at spot, of energy consumption including delivering the bills at spot, maintenance of Meter Reading books and other incidental works thereto including associated clerical work arranging and re-arranging pro forma bills, check working of Meters, Meter Seals and General condition of installation during routine Meter Reading, make note in the diary and record in a register regarding defects, deficiencies and unauthorized connections and reconnections etc, etc. Reporting the Section Officer regarding any *abnormalities in the readings*, change in nature of installation, suspected pilferage of energy etc. noticed during the course of meter readings. Here it is also evident to note that the Meter Reader of the licensee, did visit the premises of the complainant since from the date of service of the above said installation, more specifically during the disputed period i.e. from May 2015 to April 2018, the Meter Reader ought to have reported to the concerned Authority regarding *slow recording* wherein his duty mandates him to do so.

iv. During the inspection / testing by the Licensee, if the meter is found to be not recording (for any reasons other than tampering) the Consumer shall be billed for a period of not more than six billing months, here in this case the consumer has been billed for nearly 3 years.

v. Even assuming but not admitting it is also submitted that in terms of KERC (Electricity Supply) Code, 2004 and its amendments (Notified in Karnataka Gazette dated: 2.12.2004) it is the duty of the licensee to test the metering equipment and repair or replace the metering equipment within the specified time frame, the licensee has failed to do so and left to accrue such huge demand.

vi. It is also important to note that, if at all the licensee's meter reader had found such error as alleged (while reading the meter on his monthly visit) which cannot be ignored he could have replaced/rectified the error by whatever means it is possible; now the consumer alone shall not be held responsible for such error. If at all the concerned individual had taken positive steps to replace/rectify the error witnessed, then there would not be such huge alleged arrears accumulated so far. Due to the alleged lapses of the respondent individual the installation was allowed to accrue the arrears to the tune of 197052/- during the month of March 2021.

vii. Even assuming but not admitting in terms of clause 27.04(vii) of Conditions of Supply in the event of delay in replacing/rectification of the meter the licensee is liable to pay a rebate of 5% on the monthly energy bills if the delay persists for more than 15 days as under:

a. If at all the licensee fails to attend the complaint then the licensee is bound to pay the consumer a rebate at the rate of 5% on the monthly energy bills if the delay persists for more than 15 days. In this case it is allegedly learnt that the licensee has replaced the alleged MNR meter in the month of June 2018 i.e. after 1090 days.

b. Before the Forum it is prayed to take the aforesaid facts into consideration and not by cryptic and non-speaking orders by simply terming it as short claim charges which will cover up the illegal acts of the Individual Licensee by shifting burden on the Consumer, which is wholly illegal and unsustainable under law.

viii. The complainant further wishes to reserve his right to refer the matter to the Electrical Inspectorate as it is the only Authority to ascertain the short claim with respect to faulty/burnt meter in terms of Clause 27 of Conditions of Supply and sub section 6 of Section 26 of the Electricity Act 1910. This Authority may please note that the licensee is bound by those provisions of the erstwhile Indian Electricity Act 1910 that are not inconsistent with the Electricity Act 2003, particularly in the context of Electricity Meters.

**ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಶಹರ ಉಪವಿಭಾಗ-2 ಹೆಸ್ಕಾಂ ಹುಬ್ಬಳ್ಳಿ ಇವರ ಲಿಖಿತ ಹೇಳಿಕೆ:**

ಶ್ರೀ.ಜಗನ್ನಾಥ.ವಿ.ಲದ್ವಾ ಇವರ ಸ್ಥಾವರ ಸಂಖ್ಯೆ: 208119C ರ ಮಾಪಕವು ಎಂ.ಎನ್.ಆರ್ ಆಗಿದ್ದು, ಬಳಕೆ ದಾಖಲಾಗದ ಅವಧಿಗೆ ಕಂದಾಯ ಕೊರತೆ ಮೊತ್ತ ಆಕರಣೆ ಮಾಡಿರುವುದಕ್ಕೆ ಮಾನ್ಯ ಅಧ್ಯಕ್ಷರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ಧಾರವಾಡ ಜಿಲ್ಲೆ ರವರಲ್ಲಿ ಸಲ್ಲಿಸಿದ ದೂರಿನ ಕುರಿತಾದ ಪ್ಯಾರಾ ವೈಸ್ ವಿವರಗಳನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

| | | |
|---|---|---|
| ಸ್ಥಾವರ ಸಂಖ್ಯೆ | : | 208119C/ 635842000 |
| ಹೆಸರು ಮತ್ತು ವಿಳಾಸ | : | ಶ್ರೀ.ಜಗನ್ನಾಥ.ವಿ.ಲದ್ವಾ |
| ಮಂಜೂರಾದ ಭಾರ | : | 4 KW |
| ಸಂಪರ್ಕ ದಿನಾಂಕ | : | 12-07-2005 |
| ಜಕಾತಿ | : | LT3 |
| ವಿವಾದಿತ ಮೊತ್ತ | : | 197052/- |
| ಕಂದಾಯ ಕೊರತೆಗೆ ಕಾರಣ | : | ಮಾಪಕವು ಎಂ.ಎನ್.ಆರ್ ಆಗಿದ್ದರಿಂದ |
| ವಿದ್ಯುತ್ ಬಳಕೆ ದಾಖಲಾಗದ ಅವಧಿ | : | ಮೇ-2015 ರಿಂದ ಏಪ್ರೀಲ್-2018 & 15 ದಿನಗಳವರೆಗೆ |

**ಪ್ರಕರಣದ ಸಂಕ್ಷಿಪ್ತ ಮಾಹಿತಿ**

1) ವಿದ್ಯುತ್ ಸ್ಥಾವರ ಸಂಖ್ಯೆ: 208119C ರ ನೋಂದಾಯಿತ ವಿದ್ಯುತ್ ಗ್ರಾಹಕರ ಹೆಸರು ಶ್ರೀ.ಜಗನ್ನಾಥ.ವಿ.ಲದ್ವಾ ಇದ್ದು, ಎಲ್.ಟಿ-3 ಜಕಾತಿಯಲ್ಲಿ 4 KW ಭಾರಕ್ಕೆ ಮಂಜೂರಾತಿ ಹೊಂದಿರುತ್ತದೆ.
2) ಸದರಿ ಸ್ಥಾವರವು ಮೇ-2015 ರಿಂದ ಏಪ್ರೀಲ್-2018 & 15 ದಿನಗಳವರೆಗೆ ಎಂ.ಎನ್.ಆರ್ ಆಗಿದ್ದರಿಂದ, ಸದರಿ ಅವಧಿಯಲ್ಲಿ ಬಳಕೆ ದಾಖಲಾಗಿರುವುದಿಲ್ಲಾ.
3) ಆಂತರಿಕ ಪರಿಶೋಧನೆ ವಿಭಾಗದವರು ಸದರಿ ಸ್ಥಾವರವನ್ನು ಪರಿಶೀಲನೆ ಮಾಡಿ, ಮೇ-2015 ರಿಂದ ಏಪ್ರೀಲ್-2018 & 15 ದಿನಗಳು ಬಳಕೆ ದಾಖಲಾಗದ ಅವಧಿಗೆ 632 ಸರಾಸರಿ ಬಳಕೆ ಯುನಿಟ್‌ಗಳಿಗೆ ರೂ.197052/- ಗಳ ಕಂದಾಯ ಕೊರತೆ ಮೊತ್ತವನ್ನು ಲೆಕ್ಕಿಕರಿಸಿ ಈ ಕಛೇರಿಗೆ ವರದಿ ನೀಡಿರುತ್ತಾರೆ.
4) ದೋಷಪೂರಿತ ಮಾಪಕವನ್ನು ಬದಲಾಯಿಸಿದ ದಿನಾಂಕ: 19-04-2018.
5) ಸದರಿ ವರದಿಯನ್ವಯ ಕಂದಾಯ ಕೊರತೆ ಮೊತ್ತ ರೂ.197052/- ಗಳನ್ನು ತುಂಬಲು ನೀಡಿದ ನೋಟೀಸ್ ಸಂಖ್ಯೆ: ಹೆಸ್ಕಾಂ/ನ.ಉ.ವಿ-2/ಸ.ಕಾ.ನಿ.ಇಂ(ವಿ)/ಸ.ಲೆ/ಹಿಸ/ಬಿ4/2020-21/15108-15160, ದಿನಾಂಕ: 06-03-2021

**ಶ್ರೀ.ಜಗನ್ನಾಥ.ವಿ.ಲದ್ವಾ Vs ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು(ವಿ), ನಗರ ಉಪವಿಭಾಗ-2 ಹೆಸ್ಕಾಂ, ಹುಬ್ಬಳ್ಳಿ. ಪ್ರಕರಣ ಸಂಖ್ಯೆ: 264/2022 ಕ್ಕೆ ಸಂಬಂಧಿಸಿದಂತೆ ನಮ್ಮ ವಿವರಣೆ ಈ ಕೆಳಗಿನಂತಿರುತ್ತದೆ.**

**ಪ್ಯಾರಾ ವೈಸ್ ಕಮೆಂಟ್ಸ್:**

1) ಜೂನ್-2015 ರಿಂದ ಏಪ್ರೀಲ್-2018 ರ ಅವಧಿಯಲ್ಲಿ ಕಡಿಮೆ ಬಳಕೆ (ಅಂದರೆ 0, 1, 2, 3, 4 ಈ ರೀತಿ) ದಾಖಲಾಗುತ್ತಾ ಬಂದು ನವ್ಹೆಂಬರ್-2017ರಂದು ಮಾಪಕವು ಎಮ್.ಎನ್.ಆರ್ ಆಗಿರುತ್ತದೆ. ಸದರಿ ಅವಧಿಗೆ ಆಂತರಿಕ ಪರಿಶೋಧನೆಯವರು ಕಂದಾಯ ಕೊರತೆ ಮೊತ್ತ ರೂ.197052/- ಗಳನ್ನು ಆಕರಿಸಿ ಕಛೇರಿಗೆ ವರದಿ ನೀಡಿದರನ್ವಯ ಈ ಕಛೇರಿ ಪ್ರೋವಿಜಿನಲ್ ನೋಟೀಸ್ ಸಂಖ್ಯೆ: ಹೆಸ್ಕಾಂ/ನ.ಉ.ವಿ-2/ ಸ.ಕಾ.ನಿ.ಇಂ(ವಿ)/ಸ.ಲೆ/ಹಿಸ/ಬಿ4/2020-21/15108-15160, ದಿನಾಂಕ: 06-03-2021 ರಡಿಯಲ್ಲಿ ಗ್ರಾಹಕರಿಗೆ ನೋಟಿಸ್ ಜಾರಿ ಮಾಡಲಾಗಿರುತ್ತದೆ.

.....5

2) ಸದರಿ ಮೊತ್ತವನ್ನು ಗ್ರಾಹಕರು ಯಾವುದೇ ತಕರಾರು ಇಲ್ಲದೆ ದಿನಾಂಕ: 06-07-2021 ರಶೀದಿ ಸಂಖ್ಯೆ: 63584290405 ರಡಿಯಲ್ಲಿ ಕಂದಾಯ ಕೊರತೆ ಮೊತ್ತವನ್ನು ಪಾವತಿಸಿರುತ್ತಾರೆ.

3) ಕೆ.ಇ.ಆರ್.ಸಿ ಕಂಡಿಕೆ 27.04(7) ರ ಪ್ರಕಾರ ಮಾಪಕದಲ್ಲಿ ಬಳಕೆ ದಾಖಲಾಗದಿದ್ದಲ್ಲಿ, ಮಾಪಕ ತಪಾಸಣಾ ವರದಿ ದಿನಾಂಕದಿಂದ 15 ದಿನಗಳೊಳಗಾಗಿ ಸದರಿ ಮಾಪಕವನ್ನು ಉತ್ತಮ ಮಾಪಕದೊಂದಿಗೆ ಬದಲಾಯಿಸಬೇಕಾಗಿದ್ದು, ಉಗ್ರಾಣದಲ್ಲಿ ಮಾಪಕಗಳು ಲಭ್ಯವಿಲ್ಲದೇ ಇದ್ದ ಕಾರಣ ಸದರಿ ಸ್ಥಾವರದ ಮಾಪಕವನ್ನು ದಿನಾಂಕ: 19-04-2018 ರಂದು ಬದಲಾಯಿಸಲಾಗಿರುತ್ತದೆ.

4) ದೋಷಪೂರಿತ ಮಾಪಕವನ್ನು ದಿನಾಂಕ: 19-04-2018 ರಂದು ಉತ್ತಮ ಮಾಪಕದೊಂದಿಗೆ ಬದಲಾಯಿಸಿದ್ದು, ನಂತರ ದಿನಾಂಕ: 04-06-2018 ರಂದು ರಂದು ಮಾಪಕದಲ್ಲಿ 99 ಯುನಿಟ್ಟುಗಳು ದಾಖಲಾಗಿದ್ದನ್ನು ಗಮನಿಸಿದರೆ ಜೂನ್-2015 ರಿಂದ ಏಪ್ರಿಲ್-2018 ರ ಅವಧಿಯಲ್ಲಿ ಬಳಕೆ ದಾಖಲಾಗದಿರುವುದರಿಂದ ಕಂಪನಿಗೆ ಆರ್ಥಿಕ ನಷ್ಟವಾಗಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬಂದಿದ್ದು, ಈಗಾಗಲೇ ಆಕರಿಸಿದ ಮೊತ್ತವು ಸರಿಯಾಗಿರುತ್ತದೆ.

## ಪ್ರಾರ್ಥನೆ

**ದಯಾಪರರವರಲ್ಲಿ ಪ್ರಾರ್ಥಿಸುವುದೇನೆಂದರೆ ಸದರಿ ಹಿಂಬಾಕಿಯು ಗ್ರಾಹಕರಿಗೆ ಯಾವುದೇ ದಂಡದ ಮೊತ್ತವಾಗಿರದೇ, ಮಾಪಕವು ದೋಷಪೂರಿತವಾಗಿದ್ದು, ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ, ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲು ಇರುವುದರಿಂದ ಕೆ.ಇ.ಆರ್.ಸಿ ನಿಯಮಾವಳಿ ಕಂಡಿಕೆ 29.03 ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತವನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಿದ್ದು, ಸದರಿ ಮೊತ್ತವನ್ನು ಗ್ರಾಹಕರು ಯಾವುದೇ ತಕರಾರಿಲ್ಲದೆ ಪಾವತಿಸಿದ್ದರಿಂದ ವಿದ್ಯುತ್ ಸ್ಥಾವರ ಸಂಖ್ಯೆ 208119C ಗೆ ಈಗಾಗಲೇ ಆಕರಿಸಲಾದ ಕಂದಾಯ ಕೊರತೆ ಮೊತ್ತ ರೂ.197052/- ಗಳು ಸರಿಯಾಗಿರುತ್ತದೆ.**

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀ ಜಗನಾಥ ವಿ ಲದ್ವಾ, ಸ್ಥಾವರ ಸಂಖ್ಯೆ: 208119C ನೇದ್ದ ಸ್ಥಾವರವು 4 ಕಿ.ವ್ಯಾ. ವಿದ್ಯುತ್ ಮಂಜೂರಾತಿ ಭಾರದೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ದಿನಾಂಕ:12-07-2005 ರಂದು ಸಂಪರ್ಕಿತಗೊಂಡಿದ್ದಿರುತ್ತದೆ. ಸದರಿ ಸ್ಥಾವರಕ್ಕೆ ಮೇ-2015 ರಿಂದ ಏಪ್ರೀಲ್-2018 & 15 ದಿನಗಳಿಗೆ ಎಮ್.ಎನ್.ಆರ್ ಎಂದು ಪರಿಗಣಿಸಿ ಆಂತರಿಕ ಪರಿಶೋಧನೆಯವರು ಸದರಿ ಅವಧಿಗೆ ಬಿಲ್ ಮಾಡಿ ರೂ. 1,97,052/- ಕಂದಾಯ ಕೊರತೆ ಮೊತ್ತವನ್ನು ಪಾವತಿಸಲು ಗ್ರಾಹಕರಿಗೆ ತಿಳಿಸಿರುತ್ತಾರೆ. ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ಸದರಿ ಸ್ಥಾವರ ಮೇ-2015 ರಿಂದ ಏಪ್ರೀಲ್-2018 ರ ಅವಧಿಯಲ್ಲಿ ಸದರಿ ಸ್ಥಾವರವು Normal ಆಗಿ ಇತ್ತು ಆದರೆ ಲೈನ್ಸನ್ಸುದಾರರು ಸ್ಥಾವರದ ಮಾಪಕವು ಎಂ.ಎನ್.ಆರ್. ಎಂದು ಕಂದಾಯ ಕೊರತೆ ಮೊತ್ತ ರೂ.1,97,052/- ಗಳನ್ನು ಆಕರಣೆ ಮಾಡಿರುತ್ತಾರೆ. ಸದರಿ ಆಕರಿಸಿದ ಮೊತ್ತವು ನಿಗಮದ ಶಾಖಾಧಿಕಾರಿಗಳು ಮತ್ತು ಮೀಟರ್ ರೀಡರ್‌ಗಳ ಕರ್ತವ್ಯದಲ್ಲಿನ ಬೇಜವಾಬ್ದಾರಿತನದಿಂದ ಆದ ತಪ್ಪಿನಿಂದಾದದ್ದು, ಆದ್ದರಿಂದ ಲೈಸನ್ಸುದಾರರು ನೀಡಿರುವ ಬಿಲ್‌ನ್ನು ವಜಾಗೊಳಿಸಿ, ನ್ಯಾಯಯುತ ಆದೇಶವನ್ನು ನೀಡಬೇಕೆಂದು ಎಂದು ಗ್ರಾಹಕರು ದಿನಾಂಕ:12-09-2022 ರಂದು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.
2. ಶ್ರೀ ಜಗನಾಥ ವಿ ಲದ್ವಾ, ಸ್ಥಾವರ ಸಂಖ್ಯೆ: 208119C ನೇದ್ದ ಸ್ಥಾವರವು 4 ಕಿ.ವ್ಯಾ. ವಿದ್ಯುತ್ ಮಂಜೂರಾತಿ ಭಾರದೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ದಿನಾಂಕ:12-07-2005 ರಂದು ಸಂಪರ್ಕಿತಗೊಂಡಿದ್ದಿರುತ್ತದೆ. ಜೂನ್-2015 ರಿಂದ ಏಪ್ರೀಲ್-2018 ರ ಅವಧಿಯಲ್ಲಿ ಕಡಿಮೆ ಬಳಕೆ ದಾಖಲಾಗುತ್ತಾ ಬಂದು ನವೆಂಬರ್-2017 ರಂದು ಮಾಪಕವು M.N.R ಆಗಿರುವುದು ಕಂಡು ಬರುತ್ತದೆ. ಸದರಿ ಅವಧಿಗೆ ಆಂತರಿಕ ಪರಿಶೋಧನೆಯವರು ಕಂದಾಯ ಕೊರತೆ ಮೊತ್ತ ರೂ. 1,97,052/-ಗಳನ್ನು ಆಕರಿಸಿ ಕಚೇರಿಗೆ ವರದಿ ನೀಡಿದನ್ವಯ ಈ ಕಚೇರಿ ಪ್ರೋವಿಜಿನಲ್ ನೋಟೀಸ್ ಸಂಖ್ಯೆ:ಹೆಸ್ಕಾಂ/ನ.ಉ.ವಿ-2/ಸ.ಕಾ.ನಿ.ಇಂ(ವಿ)/ಸ.ಲೆ/ಹಿಸ/ಬಿ4/2020-21/15108-15160 ದಿನಾಂಕ:06-03-2021. ರಡಿಯಲ್ಲಿ ಗ್ರಾಹಕರಿಗೆ ನೋಟೀಸ್ ಜಾರಿ ಮಾಡಿರುವುದು ಕಂಡು ಬರುತ್ತದೆ. ಸದರಿ ಕಂದಾಯ ಕೊರತೆ ಮೊತ್ತವನ್ನು ಗ್ರಾಹಕರು ಯಾವುದೇ ತಕರಾರು ಇಲ್ಲದೇ ದಿನಾಂಕ:06-07-2021 ರಶೀದಿ ಸಂಖ್ಯೆ:63584290405 ರಲ್ಲಿ ಕಂಪನಿಗೆ ಪಾವತಿಸಿರುವುದು ಕಂಡು ಬರುತ್ತದೆ.

.....6

3. ಸದರಿ ಸ್ಥಾವರದ ಹಿಂಬಾಕಿಯೂ ಯಾವುದೇ ದಂಡದ ಮೊತ್ತವಾಗಿರದೇ ಮಾಪಕವು ದೋಷಪೂರಿತವಾಗಿದ್ದು, ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ, ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲು ಇರುವುದರಿಂದ ಕೆ.ಇ.ಆರ್.ಸಿ.. ನಿಯಮಾವಳಿ ಕಂಡಿಕೆ 29.03 ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತವನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಿದ್ದು, ಸದರಿ ಮೊತ್ತವನ್ನು ಗ್ರಾಹಕರು ಯಾವುದೇ ತಕರಾರಿಲ್ಲದೆ ಪಾವತಿಸಿರುವುದು ಕಂಡು ಬರುತ್ತದೆ. ವಿದ್ಯುತ್ ಸ್ಥಾವರ ಸಂಖ್ಯೆ 208119C ಗೆ ಈಗಾಗಲೇ ಆಕರಿಸಲಾದ ಕಂದಾಯ ಕೊರತೆ ಮೊತ್ತ ರೂ. 1,97,052/-ಗಳನ್ನು ಆಕರಿಸಿರುವುದ ಸರಿ ಇರುತ್ತದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ಸದರಿ ಪ್ರಕರಣದಲ್ಲಿ ಲೈಸನ್ಸುದಾರರು KERC, COS, Regulation 27.04 ಪ್ರಕಾರ ಸದರಿ ಸ್ಥಾವರಕ್ಕೆ ವಿಧಿಸಿರುವ ಕಂದಾಯ ಕೊರತೆ ಮೊತ್ತವನ್ನು ಗರೀಷ್ಠ 6 ತಿಂಗಳ ಅವಧಿಗೆ ಪರಿಷ್ಕರಿಸಿ, ಗ್ರಾಹಕರಿಗೆ ಪರಿಷ್ಕೃತ ಬಿಲ್ಲನ್ನು ನೀಡಿ, ಪಾವತಿಸಿಕೊಳ್ಳುವ/ ಹೊಂದಾಣಿಕೆ ಮಾಡಿಕೊಳ್ಳು ಕ್ರಮ ಜರುಗಿಸಬೇಕಾಗುತ್ತದೆ.

2 DEC 2022

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-264/2022/** CYS-988 **ದಿನಾಂಕ:**

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ: ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/ 13-14/ಸಿವೈಎಸ್-769 ದಿ:06-07-2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/19-20/ ಸಿವೈಎಸ್-5493 ದಿ.12.03.2020 ಮತ್ತು HESCOM/DF/CA/DCA/AO(RA)/2021-22/CYS-6004 Date:18-02-2022 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿರವರು ಸದರಿ ಸ್ಥಾವರಕ್ಕೆ ವಿಧಿಸಿರುವ ಕಂದಾಯ ಕೊರತೆ ಮೊತ್ತವನ್ನು KERC, COS, Regulation 27.04 ಪ್ರಕಾರ ಬಿಲ್‌ನ್ನು ಪರಿಷ್ಕರಿಸಿ, ಗ್ರಾಹಕರಿಗೆ ಪರಿಷ್ಕೃತ ಬಿಲ್ಲನ್ನು ನೀಡಿ, ಪಾವತಿಸಿಕೊಳ್ಳುವ/ಹೊಂದಾಣಿಕೆ ಮಾಡಿಕೊಳ್ಳು ಕ್ರಮ ಜರುಗಿಸುವುದು.

**(ರೇವಣಸಿದ್ದಪ್ಪ ಗವಣ್ಣವರ)**
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

**(ಶ್ರೀಮತಿ ಲೀಲಾ ಆರ್ ಹಿರೇಮಠ)**
ಆಯೋಗದಿಂದ ನಿಯೋಜಿಸಲಾ
ಸದಸ್ಯರು.

**(ಶ್ರೀಮತಿ ಶರಣಮ್ಮ ಎಸ್ ಜಂಗಿನ)**
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವಲಯ ಕಚೇರಿ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

O/C

ಗೆ,
ಶ್ರೀ ಜಗನಾಥ ವಿ ಲದ್ವಾ,
(R R No : 208119C)
C/o ಟಿ ಎಂ ಬದ್ದಿ,
ಅರಿಹಂತ ಪಾರ್ಕ,
ಕೇಶ್ವಾಪೂರ ಹುಬ್ಬಳ್ಳಿ-580023.

ನೊಂದಾಯಿತ ಅಂಚೆ ACK

ಪ್ರತಿ:

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ವಿಭಾಗ, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಮಹಾ ಕಡತ.